## ಕರ್ನಾಟಕ ಪಬ್ಲಿಕ ಸ್ಕೂಲ್ ಮಂಕಿ, ತಾ: ಹೊನ್ನಾವರ ಜಿ: ಉತ್ತರ ಕನ್ನಡ

# ಯಶೋಗಾಥೆ

**ಶಾಲೆಯಹೆಸರು: ಕರ್ನಾಟಕ ಪಬ್ಲಿಕ ಸ್ಕೂಲ್ ಮಂಕಿ**

**ತಾಲೂಕು : ಹೊನ್ನಾವರ ಜಿಲ್ಲೆ :ಉತ್ತರಕನ್ನಡ**

ಮುಖ್ಯ ಶಿಕ್ಷಕರ ಹೆಸರು : ಶ್ರೀಮತಿ ಶೈಲಾ ಎಮ್. ಭಟ್ಟ
ದೂರವಾಣಿ ಸಂಖ್ಯೆ:9483187922
ಈ.ಮೇಲ್ ವಿಳಾಸ:hmghsmanki@gmail.com

**ಶಾಲೆಯ ಫೋಟೊ**






## ಶಾಲಾ ಪ್ರಾರಂಭದ ಇತಿಹಾಸ:

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಮಂಕಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ  ಮಂಕಿ, ಮೂಲತ: 1960 ನೇ ಇಸವಿಯಲ್ಲಿ ಎಕ್ಸ.ಟಿ.ಡಿ.ಬಿ. ಸ್ಕೂಲ ಎಂಬ ಹೆಸರಿನಲ್ಲಿ ಪ್ರಾರಂಭಗೊಂಡಿತು. ತದನಂತರ ಈ ಪ್ರೌಢಶಾಲೆಯು 1992 ರಲ್ಲಿ ಪದವಿ ಪೂರ್ವ ಕಾಲೇಜಾಗಿ ಉನ್ನತೀಕರಿಸಲ್ಪಟ್ಟಿತು. ಬೆಳೆದು ನಿಂತ ಸಂಸ್ಥೆ 2018–19 ನೇ ಶೈಕ್ಷಣಿಕ ವರ್ಷದಲ್ಲಿ ಈ ಶಾಲೆ ಕರ್ನಾಟಕ ಪಬ್ಲಿಕ್ ಸ್ಕೂಲ್ಎಂದು ಮರುನಾಮಕರಣಗೊಂಡಿದ್ದು ಪ್ರಸಕ್ತ ಈ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ಹಂತದಿಂದ ಪದವಿ ಪೂರ್ವ ವಿಭಾಗದವರೆಗೆ 671 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಪ್ರತೀ ಫ಼ರ್ಷ ಶಾಲಾ ಪ್ರಾರಂಭೋತ್ಸವ ದಿನದಂದು ಶಾಲೆಯನ್ನು ತಳಿರು ತೋರಣಗಳಿಂದ ಸಿಂಗರಿಸಿ, ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಸ್ವಾಗತಿಸಲಾಗುವುದು.





ನಮ್ಮ ಶಾಲೆ ಒಟ್ಟೂ 5 ಎಕರೆ ವಿಸ್ತೀರ್ಣವುಳ್ಳ ವಿಶಾಲ ಮೈದಾನದಲ್ಲಿ ತಲೆಯೆತ್ತಿ ನಿಂತು ಸಕಲ ಮೂಲಭೂತ ಸೌಕರ್ಯಗಳೊಂದಿಗೆ ನಮ್ಮ ಶಾಲೆಯು 1–7 ನೇ ತರಗತಿಯವರೆಗೆ ಕನ್ನಡ, 1–6 ನೇ ತರಗತಿಯವರೆಗೆ ಇಂಗ್ಲೀಷ ಮಾಧ್ಯಮ ಹಾಗೂ ಪ್ರೌಢಶಾಲೆಯಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮಗಳಿವೆ. ಪದವಿ ಪೂರ್ವಕಾಲೇಜು ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳನ್ನು ಒಳಗೊಂಡಿದೆ. ಸುಸಜ್ಜಿತ ಕಟ್ಟಡ, ಸ್ಮಾರ್ಟಕ್ಲಾಸ್ ವ್ಯವಸ್ಥೆ ಹಾಗೂ ಅನುಭವಿ ನುರಿತ ಶಿಕ್ಷಕರನ್ನು ಹೊದಿರುವ ನಮ್ಮ ಶಾಲೆಯು ಗುಣಾತ್ಮಕ ಶಿಕ್ಷಣದ ಮೂಲಕ ಹೊನ್ನಾವರ ತಾಲೂಕಿನ ಉತ್ತಮ ಶಾಲೆಗಳಲ್ಲೊಂದಾಗಿ ಕಾರ್ಯನಿರ್ವಹಿಸುತ್ತಿದೆ.

## ಶಾಲಾ ಆಟದ ಮೈದಾನ



## ವಿದ್ಯಾರ್ಥಿಗಳ ಕಲಿಕಾ ಪ್ರಗತಿಯ ವಿಶ್ಲೇಷಣಾ ವರದಿ

ನಲಿ–ಕಲಿ ಮಕ್ಕಳಿಗೆ ಸಂತಸದಾಯಕ ಹಾಗೂ ಚಟುವಟಿಕೆ ಆಧಾರಿತ ಕಲಿಕಾ ವಿಧಾನವಾಗಿದೆ. ಇದು ಮಕ್ಕಳ ಸ್ವಕಲಿಕೆ ಹಾಗೂ ವೇಗದ ಕಲಿಕೆಗೆ ಪೂರಕವಾಗಿದೆ. ಇದು ರಾಜ್ಯದ ಎಲ್ಲಾ ಕನ್ನಡ ಮಾಧ್ಯಮದ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೧,೨ ಮತು ೩ನೇ ತರಗತಿಗೆ ಅನುಷ್ಠಾನಗೊಂಡಿರುವ ಈ ನಲಿಕಲಿ ಪದ್ಧತಿ ನಮ್ಮ ಕೆ.ಪಿ.ಎಸ್ ಪ್ರಾಥಮಿಕ ವಿಭಾಗದಲ್ಲಿಕೂಡ ವಿದ್ಯುಕ್ತವಾಗಿ ಉದ್ಘಾಟನೆಗೊಂಡು ವಿದ್ಯಾರ್ಥಿಗಳು ಈ ಪದ್ಧತಿಯಲ್ಲಿ ನಲಿಯುತ್ತಾ ಕಲಿಕೆಯಲ್ಲಿ ಪಾಲ್ಗೊಳ್ಳುವುದನ್ನು ಕಾಣಬಹುದು.





## ಕಳೆದ ಮೂರು ವರ್ಷಗಳ ಎಸ್.ಎಸ್.ಎಲ್.ಸಿ ಫಲಿತಾಂಶ

ಕುಗ್ರಾಮಗಳಿಂದ ಬರುವ ವಿದ್ಯಾರ್ಥಿಗಳು ಹಾಗೂ ಬಹುಪಾಲು ಅನಕ್ಷರಸ್ಥರು, ಕೂಲಿಕಾರ್ಮಿಕರನ್ನೇ ಪಾಲಕ/ಪೋಷಕರನ್ನಾಗಿ ಹೊಂದಿರುವ ನಮ್ಮ ಸಂಸ್ಥೆ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿನೂ ಹಿಂದೆ ಉಳಿದಿಲ್ಲ. ಕಳೆದ ಹಲವು ವರ್ಷಗಳಿಂದ ಶೇಕಡಾ 90 ಕ್ಕೂ ಅಧಿಕ ಫಲಿತಾಂಶವನ್ನು ಪಡೆದು ಉತ್ತಮ ಶ್ರೇಣಿಯನ್ನು ಪಡೆದುಕೊಂಡಿದೆ.

| ಕ್ರಮ ಸಂಖ್ಯೆ | ಶೈಕ್ಷಣಿಕ ವರ್ಷ | ಶಾಲಾ ಫಲಿತಾಂಶ |
|---|---|---|
| **1** | **2021–22** | **94.02%** |
| **2** | **2022–23** | **95.52%** |
| **3** | **2023–24** | **90.90%** |




## ಶಾಲೆಯ ಭೌತಿಕ ಪರಿಸರ

ಕರ್ನಾಟಕ ಪಬ್ಲಿಕ್ ಶಾಲೆ ಮಂಕಿಯು 5 ಎಕರೆಯಷ್ಟು ವಿಶಾಲವಾದ ಭೂಮಿಯನ್ನು ಹೊಂದಿದ್ದು, **2021-22**ನೇ ಸಾಲಿನ ಕೆ.ಪಿ.ಎಸ್ ಮೂಲಭೂತ ಸೌಕರ್ಯ ಅಭಿವೃದ್ಧಿ ಅನುದಾನದಡಿ ಒಟ್ಟು **2** ಕೋಟಿ ಅನುದಾನದಲ್ಲಿ **11** ಕೊಠಡಿಗಳ ಸುಸಜ್ಜಿತಕಟ್ಟಡವನ್ನು ಹೊಂದಿದೆ. ಈ ಕಟ್ಟಡದಲ್ಲಿ ಗ್ರಂಥಾಲಯ, ಕಂಪ್ಯೂಟರ್‌ಕೊಠಡಿ, ವಿಜ್ಞಾನ ಪ್ರಯೋಗಾಲಯ, ನಾಟಕ ತರಬೇತಿಗಾಗಿ ರಂಗ ಪ್ರಯೋಗಾಲಯ, ಸ್ಮಾರ್ಟ್‌ಕ್ಲಾಸ್ ಕೊಠಡಿಗಳನ್ನು ಒಳಗೊಂಡಿದೆ.

ಮೂರು ಎಕರೆಯಟ್ಟು ವಿಶಾಲವಾದ ಕ್ರೀಡಾಂಗಣವಿದ್ದು, ಅಗತ್ಯ ಕ್ರೀಡಾ ಅಂಕಣಗಳನ್ನು ಹೊಂದಿದೆ. ಕ್ರೀಡಾಚಟುವಟಿಕೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆಗೈಯುತ್ತಿದ್ದಾರೆ. ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆ ಇದ್ದು, ಬೋರ್‌ವೆಲ್ ಮೂಲಕ ನೀರಿನ ಸೌಲಭ್ಯ ಒದಗಿಸಲಾಗಿದೆ. ವಿದ್ಯಾರ್ಥಿಗಳಿಗೆ ವಾಟರ್ ಪ್ಯೂರಿಫೈಯರ್ ಸೌಲಭ್ಯವಿದ್ದು , ಶುದ್ಧಕುಡಿಯುವ ನೀರುದೊರೆಯುತ್ತದೆ.

೧.ವಿಶಾಲವಾದ ಮೈದಾನ





## 2. ಕಂಪ್ಯೂಟರ್‌ಕೊಠಡಿ





## 3. ವಿಜ್ಞಾನ ಪ್ರಯೋಗಾಲಯ

ಪ್ರಸಕ್ತ ಸಾಲಿನ ಪತ್ಯಕ್ರಮಕ್ಕನುಗುಣವಾಗಿ ಬಹುತೇಕ ಎಲ್ಲಾ ವಿಜ್ಞಾನ ಉಪಕರಣಗಳನ್ನೊಳಗೊಂಡ ಪ್ರಯೋಗಾಲಯ ನಮ್ಮ ಸಂಸ್ಥೆಯಲ್ಲಿದ್ದು ವಿದ್ಯಾರ್ಥಿಗಳು ವಿಷಯವನ್ನು ಪ್ರಯೋಗದ ಮೂಲಕ ಮನದಟ್ಟು ಮಾಡಿಕೊಳ್ಳುವಲ್ಲಿ ಸಹಕಾರಿಯಾಗಿದೆ.





## ೪. ನಾಟಕ ತರಬೇತಿಗಾಗಿ ರಂಗ ಪ್ರಯೋಗಾಲಯ

ವಿಶೇಷ ಶಿಕ್ಷಕರಾದ ಶ್ರೀ ರಾಘವೇಂದ್ರ ಆಚಾರಿ ಅವರ ಕಲಾಕುಂಚದಲ್ಲಿ ಮೂಡಿಬಂದ ವರ್ಲಿಆರ್ಟ್ಸ್ ಮೂಲಕ  ರಂಗ ಪ್ರಯೋಗಾಲಯವು ವಿದ್ಯಾರ್ಥಿಗಳನ್ನು ಕಲಾಸಕ್ತರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ.











## ೫. ಸ್ಮಾರ್ಟ್‌ಕ್ಲಾಸ್ ಕೊಠಡಿ

ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಬಳಕೆಯಿಂದಾಗಿ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿದ್ದಲ್ಲದೆ, ವಿದ್ಯಾರ್ಥಿಗಳು ತಮ್ಮನ್ನು ತಾವು ಕಲಿಕೆಯಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತಿದೆ.





## ೬. ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆ

ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಶೌಚಾಲಯ ವ್ಯವಸ್ಥೆಇದ್ದು, ಬೋರ್‌ವೆಲ್ ಮೂಲಕ ನೀರಿನ ಸೌಲಭ್ಯ ಒದಗಿಸಲಾಗಿದೆ.







## 7. ನಾವಿನ್ಯಯುತ ಕಲಿಕಾ ಪ್ರಕ್ರಿಯೆಗಳು

ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್ ಬಳಕೆ, ಸ್ಮಾರ್ಟ್‌ಕ್ಲಾಸ್ ಅಳವಡಿಕೆ ಈ ತಂತ್ರಜ್ಞಾನವನ್ನು ಬಳಸಿಕೊಂಡು ರಸಪ್ರಶ್ನೆ, ಸಾಮರ್ಥ್ಯಾಧಾರಿತ ಕಲಿಕೆ, ಯೋಗ ತರಬೇತಿ ಇವುಗಳ ಮೂಲಕ ಕಲಿಕೆ ಅತ್ಯಂತ ಸಂತಸದಾಯಕ ಹಾಗೂ ಫಲಪ್ರದವಾಗುವಂತೆ ಮಾಡುವಲ್ಲಿ ಸಂಸ್ಥೆಯ ಸಮಸ್ತ ಶಿಕ್ಷಕವೃಂದದವರು ಪ್ರಯತ್ನಿಸುತ್ತಿದ್ದಾರೆ.



## ವಿಶೇಷ ಚಟುವಟಿಕೆಗಳು ಹಾಗೂ ಸಾಧನೆಗಳು

೧. ೨೦೨೪-೨೫ನೇ ಸಾಲಿನ ಕಲೋತ್ಸವ ಸ್ಪರ್ಧೆಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ಮಂಕಿಯ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟವನ್ನು ಪ್ರತಿನಿಧಿಸುತ್ತಿರುವುದು ಸಂಸ್ಥೆಯ ಸಾಧನೆಯ ಹಾದಿಗೊಂದು ನಿದರ್ಶನ.






2. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ಉತ್ತರಕನ್ನಡ ಇವರ ಸಹಯೋಗದಲ್ಲಿ ಪ್ರಾಚ್ಯಪ್ರಜ್ಞೆ ಪ್ರಬಂಧ ಸ್ಪರ್ಧೆ ವಿಭಾಗದಲ್ಲಿ ನಮ್ಮ ಸಂಸ್ಥೆಯ ವಿದ್ಯಾರ್ಥಿನಿ ಕುಮಾರಿ ವೈಷ್ಣವಿ ಸುಬ್ರಾಯ ಆಚಾರಿ ಈಕೆ ಶ್ರೀಮತಿ ಭಾರತಿ ಶಾನಭಾಗ ಇವರ ಮಾರ್ಗದರ್ಶನದಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುವುದು ನಮ್ಮ ಸಾಧನೆಗೆ ಹಿಡಿದಕನ್ನಡಿಯಾಗಿದೆ.



